# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1273 |
| ಮಾನ್ಯ ಸದಸ್ಯರ ಹೆಸರು | ಶ್ರೀ ಮಂಜುನಾಥ್ ಭಂಡಾರಿ(ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.12.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಪ್ರಸ್ತುತ ಕಂದಾಯ ಇಲಾಖೆ ಭೂಮಿಗಳಿಗೆ ಪೋಡಿಯಾಗಲು ಬಾಕಿ ಇರುವ ಒಟ್ಟು ಪ್ರಕರಣಗಳ ಸಂಖ್ಯೆ ಎಷ್ಟು; ಅವುಗಳಲ್ಲಿ ಯಾವ ಯಾವ ವಿಧದ ಪೋಡಿ ಆಗದೇ ಬಾಕಿ ಯಿವೆ: ಎಷ್ಟು ಅವಧಿಯಿಂದ ವಿಲೇವಾರಿಗೆ ಬಾಕಿ ಇವೆ; ಅದಕ್ಕೆ ಕಾರಣಗಳೇನು; | ರಾಜ್ಯದಲ್ಲಿ ಮೋಜಿಣಿ ತಂತ್ರಾಂಶದಲ್ಲಿ ವಿವಿಧ ರೀತಿಯ ಒಟ್ಟು 2,07,190 ಪೋಡಿ ಪ್ರಕರಣಗಳು ಬಾಕಿಯಿರುತ್ತವೆ. ಈ ಪೈಕಿ 1,00,231 ಪ್ರಕರಣಗಳು ಪಹಣಿ ತಿದ್ದುಪಡಿಗಾಗಿ ಕಂದಾಯ ಶಾಖೆಯಲ್ಲಿ ಮತ್ತು 1,06,959 ಪ್ರಕರಣಗಳು ಭೂಮಾಪನ ಶಾಖೆಯಲ್ಲಿ ಬಾಕಿಯಿರುತ್ತವೆ.<br><br>ಬಾಕಿಯಿರುವ ಪ್ರಕರಣಗಳು - ತತ್ಕಾಲ್ ಪೋಡಿ, ಪೋಡಿ ಮುಕ್ತ ಗ್ರಾಮ ಯೋಜನೆ, ಕೋರ್ಟ್ ಪೋಡಿ ಮತ್ತು ಬಗರ್‌ಹುಕುಂ ಪೋಡಿ ಪ್ರಕರಣಗಳಾಗಿರುತ್ತವೆ.<br><br>ಈ ಅರ್ಜಿಗಳು ಸನ್ 2019-20 ನೇ ಸಾಲಿನಿಂದ ಬಾಕಿ ಇರುತ್ತವೆ.<br><br>**ಈ ಪೋಡಿ ಪ್ರಕರಣಗಳು ಬಾಕಿ ಇರಲು ಪ್ರಮುಖ ಕಾರಣಗಳು:-**<br><br>1. ಆಕಾರಬಂದು & ಪಹಣಿ ಹಾಗೂ ಪಹಣಿ ಕಾಲಂ 3 & 9 ರಲ್ಲಿ ವಿಸ್ತೀರ್ಣದ ವ್ಯತ್ಯಾಸ;<br>2. ಪಹಣಿ ತಿದ್ದುಪಡಿ ಮಾಡಲು ಅವಶ್ಯಕವಾದ ಹಿಂದಿನ ಕಂದಾಯ ದಾಖಲೆಗಳು (ಮ್ಯುಟೇಷನ್, ಪಹಣಿ, ಮಂಜೂರಿ ಆದೇಶ-ಇತರೆ) ಲಭ್ಯವಾಗದಿರುವುದು;<br>3 ನಮೂನೆ 1-5 ಭರ್ತಿ ಮಾಡಲು ಕನಿಷ್ಠ ಮಂಜೂರಿ ದಾಖಲೆ ಲಭ್ಯವಾಗದೇ ಇರುವುದು;<br>4. ಮಂಜೂರಿ/ಹಕ್ಕಿನಂತೆ & ಅನುಭವದ ವಿಸ್ತೀರ್ಣದ ವ್ಯತ್ಯಾಸವಿರುವುದ ರಿಂದ;<br>5. ಮೂಲ ಭೂದಾಖಲೆಗಳು/ಕಂದಾಯ ದಾಖಲೆಗಳು ಶಿಥಿಲವಾಗಿದ್ದು, ಅವುಗಳ ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಕಾಶ ಬೇಕಾಗುವುದು;<br>6. ಅಳತೆ ವೇಳೆ ಜಮೀನಿನ ಹಕ್ಕು ಮತ್ತು ಗಡಿ ವಿಚಾರದಲ್ಲಿ ತಕರಾರು ಮತ್ತು ವ್ಯಾಜ್ಯಗಳು |

| | | |
|---|---|---|
| | | ಇರುವುದು;<br>7. ಸರ್ಕಾರಿ/ಪರವಾನಗಿ ಭೂಮಾಪಕರಿಗೆ ಪ್ರತಿ ಮಾಹೆ ನಿಗಧಿತ ಗುರಿಯಂತೆ ಕೆಲಸ ನಿರ್ವಹಿಸುತ್ತಿದ್ದು, ಗುರಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತಿಯಾಗು ತ್ತಿರುವುದರಿಂದ ಪೋಡಿ ಅರ್ಜಿಗಳ ವಿಲೇವಾರಿಯಲ್ಲಿ ವಿಳಂಬವಾಗುತ್ತಿದೆ. |
| (ಆ) | ಕಂದಾಯ ಇಲಾಖೆಯಿಂದ ಪೋಡಿ ಅಭಿಯಾನಕ್ಕೆ ನಿಗದಿತ ವೇಳಾಪಟ್ಟಿಯಂತೆ ಕಾರ್ಯಕ್ರಮ ರೂಪಿಸಿದ್ದರೂ ನಿಗದಿತ ಯಶಸ್ಸು ಸಾಧಿಸದಿರಲು ಕಾರಣಗಳೇನು; ಈ ಕುರಿತಂತೆ ಯಾವ ಯಾವ ಸಮಸ್ಯೆಗಳು ಇಲಾಖೆಯ ಗಮನಕ್ಕೆ ಬಂದಿವೆ; ಮತ್ತು ಅವುಗಳನ್ನು ಬಗೆಹರಿಸಲು ಕೈಗೊಂಡ ಕ್ರಮಗಳೇನು; | ರಾಜ್ಯದಲ್ಲಿ ಇರುವ ಬಹುಮಾಲೀಕತ್ವದ ಖಾಸಗಿ/ಹಿಡುವಳಿ ಜಮೀನುಗಳನ್ನು ಅಳತೆಗೆ ಒಳಪಡಿಸಿ ಏಕ ಮಾಲೀಕತ್ವಕ್ಕೆ ಪರಿವರ್ತಿಸುವ ಉದ್ದೇಶದಿಂದ ರಾಜ್ಯದಲ್ಲಿ ನಗರ ಪ್ರದೇಶದ ವಿಧಾನ ಸಭಾ ಕ್ಷೇತ್ರಗಳನ್ನು ಹೊರತು ಪಡಿಸಿ, ಉಳಿದ 174 ವಿಧಾನ ಸಭಾ ಕ್ಷೇತ್ರಗಳಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆ ಯನ್ನು ಸೆಪ್ಟೆಂಬರ್-2015 ರಿಂದ ಪ್ರಾರಂಭಿಸಲಾಗಿದ್ದು, ಈವರೆಗೆ ಒಟ್ಟು 19,635 ಗ್ರಾಮಗಳನ್ನು ಆಯ್ಕೆ ಮಾಡಿ ಕೊಂಡು ಅಳತೆ ಕಾರ್ಯ ಪೂರೈಸಲಾಗಿದ್ದು, ಯೋಜನೆ ಕಾರ್ಯ ಪ್ರಗತಿಯಲ್ಲಿದೆ.<br><br>ದರಖಾಸ್ತು ಪೋಡಿ ದುರಸ್ತಿ ಮಾಡುವ ಕುರಿತು ಸರ್ಕಾರವು "ದರಖಾಸ್ತು ಪೋಡಿ ಅಭಿಯಾನ" ಪ್ರಾರಂಭಿಸಿದ್ದು, ಸರ್ಕಾರದ ಆದೇಶ ಸಂಖ್ಯೆ:ಕಂಇ 156 ಎಸ್‌ಎಸ್‌ಎಂ 2024, ದಿನಾಂಕ: 25-11-2024 ರಲ್ಲಿ ನಮೂನೆ 01 ರಿಂದ 05 ಮತ್ತು 06 ರಿಂದ 10ಅನ್ನು ಭರ್ತಿ ಮಾಡಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರಳೀಕರಿಸಿದೆ.<br><br>ನಮೂನೆ 01 ರಿಂದ 05 ಗಳಿಗೆ ಸಂಬಂಧಿಸಿದ ಉಪ ವಿಭಾಗಾಧಿಕಾರಿ ಮತ್ತು ಭೂದಾಖಲೆಗಳ ಉಪ ನಿರ್ದೇಶಕರು ಮೇಲು ಸಹಿ ಮಾಡಬೇಕಾಗಿರುವ ಕ್ರಮವನ್ನು ರದ್ದುಪಡಿಸಿ, ಇದನ್ನು ದೃಢೀಕರಿಸುವ ಜವಾಬ್ದಾರಿಯನ್ನು ತಹಶೀಲ್ದಾರ್ ರವರಿಗೆ ಸೀಮಿತಗೊಳಿಸಿದೆ ಮತ್ತು ಸರ್ಕಾರಿ ಸರ್ವೆ ನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕಕಾಲದಲ್ಲಿ ದುರಸ್ತಿ ಪಡಿಸುವಂತೆ ಸೂಚಿಸಿದೆ. ಕಡ್ಡಾಯವಾಗಿ ಪ್ರತಿ ಸರ್ವೆ ನಂಬರಿಗೆ ಒಂದು ಬಾರಿಗೆ ಎಲ್ಲಾ ಮಂಜೂರಿದಾರರಿಗೆ ಏಕಕಾಲಕ್ಕೆ ನಮೂನೆ 1 ರಿಂದ 5 ಗಳನ್ನು ಭರ್ತಿ ಮಾಡಿ ಡಿಜಿಟಲ್ ಮೇಲು ಸಹಿ ಮಾಡಲು & ಅದೇ ರೀತಿ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಸಹ ಆನ್‌ಲೈನ್ ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ. |

| | | |
|---|---|---|
| (ಇ) | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೋಡಿ ಅಭಿಯಾನಕ್ಕೆ ಒಳಗೊಂಡ ಅರ್ಜಿಗಳೆಷ್ಟು; ಇವುಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಈಗಾಗಲೇ ಕ್ರಮವಾಗಿದೆ; ಎಷ್ಟು ಅರ್ಜಿಗಳು ಬಾಕಿ ಇವೆ; | ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆ ಮತ್ತು ದರಖಾಸ್ತು ಪೋಡಿ ಅಭಿಯಾನಗಳಲ್ಲಿ ಸಾದಿಸಿರುವ ಪ್ರಗತಿಯನ್ನು ಅನುಭಂದದಲ್ಲಿ ಲಗತ್ತಿಸಿದೆ. |
| (ಈ) | ಉಭಯ ಜಿಲ್ಲೆಗಳಲ್ಲಿ ಯಾವ ಯಾವ ವಿಧದ ಪೋಡಿ ಪ್ರಕರಣ ಅರ್ಜಿಗಳು ಬಾಕಿಯಿವೆ; ಬಾಕಿ ಇರಲು ಕಾರಣಗಳೇನು; ಈಗಾಗಲೇ ಗಮನಕ್ಕೆ ಬಂದ ಅಡಚಣೆಗಳನ್ನು ನಿವಾರಿಸಿ ಬಾಕಿ ಇರುವ ಪೋಡಿ ಪ್ರಕರಣದ ಅರ್ಜಿಗಳನ್ನು ಕ್ರಮ ಪ್ರಕಾರ ಪೂರ್ಣಗೊಳಿಸಲು ಎಷ್ಟು ಕಾಲಾವಧಿ ಬೇಕಾಗಿದೆ; | (see below) |

ಉಡುಪಿ ಜಿಲ್ಲೆಯಲ್ಲಿ ಬಾಕಿಯಿರುವ ಪೋಡಿ ಪ್ರಕರಣಗಳ ವಿವರ:-

| | **ಒಟ್ಟು ಬಾಕಿ** | **ಕಂದಾಯ ಶಾಖೆಯಲ್ಲಿ ಬಾಕಿ** | **ಭೂಮಾಪನ ಶಾಖೆಯಲ್ಲಿ ಬಾಕಿ** |
|---|---|---|---|
| ತತ್ಕಾಲ್ ಪೋಡಿ | 4886 | 2521 | 2365 |
| ಪೋಡಿ ಮುಕ್ತ ಗ್ರಾಮ ಯೋಜನೆ | 1007 | 21 | 986 |
| ಕೋರ್ಟ್ ಪೋಡಿ | 165 | 38 | 127 |
| ಬಗರ್ ಹುಕುಂ ಪೋಡಿ | 29 | 23 | 6 |
| | **6087** | **2603** | **3484** |

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಾಕಿಯಿರುವ ಪೋಡಿ ಪ್ರಕರಣಗಳ ವಿವರ:-

| | **ಒಟ್ಟು ಬಾಕಿ** | **ಕಂದಾಯ ಶಾಖೆಯಲ್ಲಿ ಬಾಕಿ** | **ಭೂಮಾಪನ ಶಾಖೆಯಲ್ಲಿ ಬಾಕಿ** |
|---|---|---|---|
| ತತ್ಕಾಲ್ ಪೋಡಿ | 4724 | 2958 | 1766 |
| ಪೋಡಿ ಮುಕ್ತ ಗ್ರಾಮ ಯೋಜನೆ | 2861 | 1838 | 1023 |
| ಕೋರ್ಟ್ ಪೋಡಿ | 56 | 16 | 40 |
| ಬಗರ್ ಹುಕುಂ ಪೋಡಿ | 7 | 0 | 7 |
| | **7648** | **4812** | **2836** |

ಬಾಕಿಯಿರುವ ಪೋಡಿ ಅರ್ಜಿಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು:-

1. ದರಖಾಸ್ತು ಪೋಡಿ ಕುರಿತಂತೆ ನಮೂನೆ 01 ರಿಂದ 05 ಮತ್ತು 06 ರಿಂದ 10 ಗಳ ಭರ್ತಿ

| | | |
|---|---|---|
| | | ಮಾಡಿ ಮತ್ತು ದೃಢೀಕರಿಸುವ ಪ್ರಕ್ರಿಯೆಯನ್ನು ಸರ್ಕಾರದ ಆದೇಶ ಸಂಖ್ಯೆ: ಕಂಇ 156 ಎಸ್‌ಎಸ್‌ಎಂ 2024, ದಿನಾಂಕ 25-11-2024 ರಲ್ಲಿ ಸರಳೀಕರಿಸಿ, ಸರ್ವೆ ನಂಬರಿನ ಎಲ್ಲಾ ಮಂಜೂರಿದಾರರಿಗೆ ಏಕಕಾಲದಲ್ಲಿ ಪೋಡಿ ದುರಸ್ತಿ ಪಡಿಸಲು ಆದೇಶಿಸಿದೆ.<br>2. ದರಖಾಸ್ತು ಪೋಡಿ ಪ್ರಕರಣಗಳಲ್ಲಿ ನಮೂನೆ 01 ರಿಂದ 05 ಗಳನ್ನು ಭರ್ತಿ ಮಾಡಿ ಡಿಜಿಟಲ್ ಮೇಲು ಸಹಿ ಮಾಡಲು & ಅದೇ ರೀತಿ ಅಳತೆ ಪ್ರಕರಣಗಳ ನಿರ್ವಹಣೆಯನ್ನು ಆನ್‌ಲೈನ್‌ನಲ್ಲಿ ನಿರ್ವಹಿಸುವ ಸಲುವಾಗಿ ಭೂಮಿ ಉಸ್ತುವಾರಿ ಕೋಶದಿಂದ ತಂತ್ರಾಂಶ ಅಭಿವೃದ್ಧಿ ಪಡಿಸಲಾಗಿದೆ.<br>3. ದರಖಾಸ್ತು ಪೋಡಿ, 11ಇ, ಹದ್ದುಬಸ್ತು ಮುಂತಾದ ಎಲ್ಲಾ ತರಹದ ಅರ್ಜಿಗಳನ್ನು ಸರ್ಕಾರಿ ಭೂಮಾಪಕರೊಂದಿಗೆ ಪರವಾನಗಿ ಭೂಮಾಪಕರನ್ನು ಸಹಾ ಬಳಸಿಕೊಂಡು ಅಳತೆ ಮಾಡಲು ಆದೇಶಿಸಿದೆ.<br>4. ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್ ಲೈನ್ ನಲ್ಲಿ ಸ್ವೀಕರಿಸ ಲಾಗುತ್ತಿದ್ದು ಮೋಜಿಣಿ ತಂತ್ರಾಂಶದ ಮೂಲಕವೇ ಅಳತೆಗಾಗಿ ಭೂಮಾಪಕರಿಗೆ ಹಂಚಿಕೆ ಮಾಡಿ, ಅಳತೆಯಾದ ನಂತರ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹಾ ತಂತ್ರಾಂಶದ ಮುಖಾಂತರ ಆನ್ ಲೈನ್ ನಲ್ಲೇ ಸರದಿ ಸಾಲಿನಂತೆ (FIFO) ನಿರ್ವಹಿಸುವ ಮೂಲಕ, ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮ ವಹಿಸಲಾಗುತ್ತಿದೆ.<br>5. ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.<br>6. ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.<br>7. ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ |

| | | |
|---|---|---|
| | | ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>ಪೋಡಿ ಕಾರ್ಯವನ್ನು ಪೂರ್ಣಗೊಳಿಸಲು ಯಾವುದೇ ಸಮಯ (ಕಾಲ ಮಿತಿ) ನಿಗದಿಪಡಿಸಲಾಗಿರುವುದಿಲ್ಲ. |
| (ಉ) | ಕಂದಾಯ ಇಲಾಖೆಯ ರಿಮಾಂಡ್ ಮಾಡಿದ ಕೇಸ್ ಅನುಷ್ಠಾನ ಸಾಫ್ಟ್‌ವೇರ್‌ನಲ್ಲಿ (remanded case implementation software) ಜುಲೈ-2025 ರಿಂದ ತಾಂತ್ರಿಕ ತೊಂದರೆಯಾದ ಕಾರಣ ಸಾರ್ವಜನಿಕರಿಗೆ ಪಹಣಿ ಬದಲಾವಣೆಯಲ್ಲಿ ಇರುವ ಸಮಸ್ಯೆಯನ್ನು ಸರಿಪಡಿಸಲು ಯಾವಾಗ ಕ್ರಮ ವಹಿಸಲಾಗುವುದು? | ಜಿಲ್ಲಾಧಿಕಾರಿ ಮತ್ತು ಉಪವಿಭಾಗಾಧಿಕಾರಿಯವರು ರಿಮಾಂಡ್ ಮಾಡಲಾಗಿರುವ ಪ್ರಕರಣಗಳನ್ನು ಪರಿಶೀಲಿಸಿ, ಆನ್‌ಲೈನ್ ಮೂಲಕ ಕ್ರಮವಹಿಸಲು RCCMS ತಂತ್ರಾಂಶದಲ್ಲಿ ಅವಕಾಶ ಕಲ್ಪಿಸಲಾಗಿದ್ದು, ಹಳೆಯ ರಿಮಾಂಡ್ ಪ್ರಕರಣಗಳನ್ನು ತಂತ್ರಾಂಶದಲ್ಲಿ ಅಳವಡಿಸುವ ಕುರಿತು ಪರಿಶೀಲನಾ ಹಂತದಲ್ಲಿರುತ್ತದೆ. |

**<u>ಸಂಖ್ಯೆ: ಕಂಇ 230 ಎಸ್‌ಎಸ್‌ಸಿ 2025</u>**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಅನುಭಂದ-1

LCQ 1273

**ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪೋಡಿ ಮುಕ್ತ ಗ್ರಾಮ ಯೋಜನೆಗಳಲ್ಲಿ ಸಾದಿಸಿರುವ ಪ್ರಗತಿ ವಿವರ**

1) ಪೋಡಿ ಮುಕ್ತ ಅಭಿಯಾನದಲ್ಲಿ ಸೆಪ್ಟೆಂಬರ್ 2015 ರಿಂದ ರಿಂದ 30-09-2022 ರವರೆಗೆ ರವರೆಗೆ ಸಾಧಿಸಿರುವ ಪ್ರಗತಿ

| ಜಿಲ್ಲೆ | ಅಳತೆ ಪೂರ್ಣ ಗೊಂಡ ಗ್ರಾಮಗಳ ಸಂಖ್ಯೆ | ದುರಸ್ತಿ ಪೂರ್ಣ ಗೊಂಡ ಗ್ರಾಮಗಳ ಸಂಖ್ಯೆ | ಇಂಡೀಕರಣ ಪೂರ್ಣ ಗೊಂಡ ಗ್ರಾಮಗಳ ಸಂಖ್ಯೆ | ಅಳತೆ ಪೂರ್ಣ ಗೊಂಡ ಬ್ಲಾಕ್ ಗಳ ಸಂಖ್ಯೆ | ದುರಸ್ತಿ ಯಾದ ಒಟ್ಟು ಬ್ಲಾಕ್ ಗಳ ಸಂಖ್ಯೆ | ಇಂಡೀಕರಣ ವಾದ ಬ್ಲಾಕ್ ಗಳ ಸಂಖ್ಯೆ |
|---|---|---|---|---|---|---|
| ಉಡುಪಿ | 68 | 67 | 67 | 46153 | 45865 | 45865 |
| ದಕ್ಷಿಣ ಕನ್ನಡ | 206 | 201 | 199 | 102773 | 99885 | 98937 |

**ಅಕ್ಟೋಬರ್-2022** ರಿಂದ ಪೋಡಿ ಮುಕ್ತ ಅಭಿಯಾನ ಯೋಜನೆ ಯನ್ನು ಮೋಜಿಣಿ ತಂತ್ರಾಂಶದ ಮುಖಾಂತರ ನಿರ್ವಹಿಸಲಾಗುತ್ತಿದೆ.

**ದಿನಾಂಕ 01-10-2022 ರಿಂದ 31-07-2025 ರವರೆಗೆ ಸಾಧಿಸಿರುವ ಪ್ರಗತಿ ವಿವರ**

| ಜಿಲ್ಲೆ | ಪ್ರಾ. ಶೀಲ್ಕು | ಸ್ವೀಕೃತಿ | ಒಟ್ಟು | ವಿಲೇ | ಒಟ್ಟು ಬಾಕಿ | ಕಂದಾಯ ಶಾಖೆಯಲ್ಲಿ ಬಾಕಿ | ಭೂಮಾಪನ ಶಾಖೆಯಲಿ ಬಾಕಿ |
|---|---|---|---|---|---|---|---|
| ಉಡುಪಿ | 0 | 2832 | 2832 | 1825 | 1007 | 21 | 986 |
| ದಕ್ಷಿಣ ಕನ್ನಡ | 0 | 25918 | 25918 | 23057 | 2861 | 1838 | 1023 |

| ಜಿಲ್ಲೆ | ಆಯ್ಕೆಗೊಂಡ ಗ್ರಾಮಗಳು | ಪೂರ್ಣಗೊಂಡ ಗ್ರಾಮಗಳು |
|---|---|---|
| ಉಡುಪಿ | 6 | 2 |
| ದಕ್ಷಿಣ ಕನ್ನಡ | 115 | 7 |

**ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದರಖಾಸ್ತು ಪೋಡಿ ಅಭಿಯಾನ ದಲ್ಲಿ ದಿನಾಂಕ 10.12.2025 ಅಂತ್ಯಕ್ಕೆ ಸಾದಿಸಿರುವ ಪ್ರಗತಿ ವಿವರ**

| ಜಿಲ್ಲೆ | ಅನುಭಂದ-1 ನೀಡಿರುವ ಮಂಜೂರಿದಾರರ ಸಂಖ್ಯೆ | ಅಳತೆಗೆ ತೆಗೆದು ಕೊಂಡಿರುವ ಮಂಜೂರಿದಾರರ ಸಂಖ್ಯೆ | ಅಳತೆ ಪೂರ್ಣ ಗೊಂಡಿರುವ ಮಂಜೂರಿದಾರರ ಸಂಖ್ಯೆ | ಅಳತೆಗೆ ಬಾಕಿಯಿರುವ ಮಂಜೂರಿದಾರರ ಸಂಖ್ಯೆ |
|---|---|---|---|---|
| ದಕ್ಷಿಣ ಕನ್ನಡ | 37177 | 25136 | 20913 | 4223 |
| ಉಡುಪಿ | 19876 | 19566 | 17149 | 2417 |